# ದುರಿಂಧರ

ಮೊನ್ನೆ ಸಿಕ್ಕಿದ್ದರು
ಹಾಗೂ ಹೀಗೂ ಮಾತನಾಡ್ತಾ ಕೇಳಿದೆ
ಗುರುವೇ ನೀವ್ ಮಾಡಿದ್ದು ಥರವೇ
ನಕ್ಕು ಹಾಗೇ ಮುಂದೆ ಹೋದರು


ಒಂದೇ ಒಂದು ಮೂಗುತಿಯಿಂದ ಮುಕ್ತಿ
ಅಷ್ಟೊಂದು ಬದಲಾವಣೆ ಹೇಗೆ ಸಾಧ್ಯ
ಹೆಂಡತಿ ಬಿಟ್ಟರಿ ಮಕ್ಕಳನೂ ಬಿಟ್ಟರಿ
ಸೋರೆ ಬುರುಡೆಯ ತಂತಿ ಹಿಡಿದು
ಬೆರಳಾಡಿಸಿ ಆಡಿಸಿ ಬಂದ
ಟಿಣ್ ಟಿಣ್ ಟಿಣ್ ಟಿಣ್ ನಾದ
ತೋರಿಸೀತೆ ಪರಂಧಾಮ
ಹೇಳಿ ಗುರುವೇ
ಮಾಡಿದ್ದು ಥರವೇ

ಆ ದಂಡಿಗೆ ಬೆತ್ತ ಆ ಗೋಪಾಲ ಬುತ್ತಿ
ಆ ಹಿಂಬಾಲಿಸುವ ಹೆಂಡತಿ ಮಕ್ಕಳು
ದಾರಿಯಲಿ ಇದ್ದೂ ಇಲ್ಲದಂತಿರುವ ಸ್ಥಿತಿ
ಕಾಣದುದಕೆ ಹಾತೊರೆವ ಹಂಬಲ
ಶಬ್ದದ ನಡುವೆ ನಿಶಬ್ದದ ಹುಡುಕಾಟ
ನಿಶ್ಯಬ್ದದಲಿ ನಾದದ ಹಿಡಿತ
ಲಕ್ಷ ಪದಗಳ ರಚನೆ ಹೇಗೆ ಸಾಧ್ಯ
ಹೇಳಿ ಗುರುವೇ
ನೀವು ಮಾಡಿದ್ದು ಥರವೇ

ಆಳುವವನ ಮುಂದೆ ಎಲ್ಲವನೂ
ಲೊಳಲೊಟ್ಟೆ ಎಂದದ್ದು
ಖಡ್ಗ ಹಿಡಿದವನ ಮುಂದೆ ಕೇವಲ
ತಂಬೂರಿ ಹಿಡಿದವರು ಆಡೋದು
ಅವರೊಡನೆ ಇದ್ದು ತಿದ್ದುವುದು ಕಷ್ಟವೆ
ರಸ್ತೆಯಲಿ ಅಷ್ಟಲ್ಲಾ ಇಟ್ಟು ಮಾರುವಾಗ
ನೋಡದಲೆ ಮುಖ ತಿರುಗಿಸುವುದು
ಇನ್ನೂ ಕಷ್ಟವೆ
ಹೇಳಿ ಗುರುವೇ
ಹೇಗೆ ಅದು ಸಾಧ್ಯ

ಕಾಣದುದಕೆ ಹುಡುಕಿ ಹುಡುಕಿ
ಕಂಡಿದ್ದನ್ನು ಹಿಡಿದು ಬರೆದಿಟ್ಟ ಪರಿ
ಜಗದೋದ್ಧಾರನ ಪದಗಳಲಿ ಆಡಿಸಿದ ಪರಿ
ಹೇಳಿ ಗುರುವೇ
ಹೇಗೆ ಅದು ಸಾಧ್ಯ
ಹೇಳಿದರು ಕೇಳಿದ್ದಕ್ಕೆ ನಗುತ್ತಲೇ
ನಾನು ಪುರಂಧರ
ನೀನೋ ದುರಿಂಧರ

● **ಆರ್. ದಿಲೀಪ್‌ಕುಮಾರ್**



ವಾಗೀಶ ಹೆಗಡೆ